**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 850/2023**

**ಫಿರ್ಯಾದುದಾರರು** ಶ್ರೀ  ರೌನಾಕ್ ಅಹ್ಮದ್ ತಂದೆಃ ಮೊಹಮ್ಮದ್ ಸೈಬ್ ಮೊಹತೇಶ್

**– ವಿರುದ್ಧ –**

**ಆರೋಪಿತರು** ಶ್ರೀ  ಮಹೇಶ ಖಾರ್ವಿ ತಂದೆಃ ರಾಮಚಂದ್ರ ಖಾರ್ವಿ,
ವಯಸ್ಸುಃ   40   ವರ್ಷ,
ಸಾಃ  104, ವಿಘ್ನೇಶ್ವರ ಕೃಪಾ, ಕರೀಕಲ್,
ಮಾವಿನಕುರ್ವೆ,  ಭಟ್ಕಳ , (ಉ.ಕ.)–581320.

**ಆಪಾದನೆ**

ಆರೋಪಿತರಾದ ನೀವು  ಪಿರ್ಯಾದುದಾರರು ಆತ್ಮೀಯ ಸ್ನೇಹಿತರಿದ್ದು, ನೀವು  ದಿನಾಂಕಃ 25–10–2022 ರಂದು  ನಿಮ್ಮ ತುರ್ತು ಅಗತ್ಯತಗೆ ಕೈ ಸಾಲವಾಗಿ ರೂ.6,50,000/–( ರೂಪಾಯಿ ಆರು ಲಕ್ಷದ ಐವತ್ತು ಸಾವಿರ ಮಾತ್ರ) ಹಣವನ್ನು ಪಡೆದುಕೊಂಡಿದ್ದು, ಮೂರು ತಿಂಗಳೊಳಗೆ ಮರುಪಾವತಿ ಮಾಡವುದಾಗಿ ದಾಖಲೆ ಪತ್ರಗಳನ್ನು ಬರೆದುಕೊಟ್ಟಿರುತ್ತೀರಿ.  ನಂತರ  ಸದ್ರಿ ಸಾಲದ ಹಣವನ್ನು  ಮರುಪಾವತಿ ಮಾಡುವ ಸಲುವಾಗಿ, ನೀವು ನಿಮ್ಮ  ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮುಖ್ಯ ಅಂಚೆ ಕಚೇರಿ ರಸ್ತೆ ಭಟ್ಕಳ  ಶಾಖೆಯ ಚೆಕ್ ನಂಬರ್ 424217 ನ್ನು  ರೂ.6,50,000/–( ರೂಪಾಯಿ ಆರು ಲಕ್ಷದ ಐವತ್ತು ಸಾವಿರ ಮಾತ್ರ) ಕ್ಕೆ ದಿನಾಂಕಃ 30–01–2023 ರ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರುತ್ತೀರಿ.  ಸದ್ರಿ ಚೆಕ್ಕನ್ನು ಫಿರ್ಯಾದಿದಾರರು ನಗಧೀಕರಣಕ್ಕಾಗಿ  ಅವರ ವ್ಯವಹಾರದ ಬ್ಯಾಂಕಾದ ಫೆಡರಲ್ ಬ್ಯಾಂಕ್, ಭಟ್ಕಳ  ಶಾಖೆಯಲ್ಲಿ ಹಾಜರುಪಡಿಸಿದಾಗ, "Funds Insufficient" ಎಂಬ ಹಿಂಬರಹದೊಂದಿಗೆ  ದಿನಾಂಕಃ 31–01–2023 ರಂದು  ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 07–02–2023 ರಂದು ತಮ್ಮ ವಕೀಲರ ಮೂಲಕ ನೋಟಿಸ್ ನ್ನು ನಿಮಗೆ ನೀಡಿದ್ದು, ಸದ್ರಿ ನೋಟಿಸ್ ನೀಡಿ ನಿಗದಿತ ಅವಧಿಯೊಳಗೆ ಚೆಕ್ಕನಲ್ಲಿ ನಮೂದಿಸಿದ ಹಣವನ್ನು ನೀಡುವಂತೆ ಸೂಚಿಸಿದ್ದು ಇರುತ್ತದೆ, ಸದ್ರಿ ನೋಟಿಸ್ಸು ನಿಮಗೆ ದಿನಾಂಕಃ 14–02–2023 ರಂದು ಜ್ಯಾರಿಯಾಗಿರುತ್ತದೆ. ಆದರೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ

ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.

ಸಹಿ ಇದೆ/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 20-06-2025. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.